68	ಗೂಡೂರ.	15	15	75,000.00
69	ಗೌಡಗಾಂವ್.	15	15	75,000.00
70	ಹಸರಗುಂಡಗಿ.	50	50	92,500.00
71	ಹಾವನೂರ.	20	20	40,500.00
72	ಹೂವಿನಳ್ಳಿ.	17	17	45,500.00
73	ಇಂಗಳಗಿ [ಬಿ].	36	36	64,500.00
74	ಕೆಕ್ಕರಸಾವಳಗಿ.	16	16	34,500.00
75	ಕೋಗನೂರ.	15	15	75,000.00
76	ಕಾಸರಭೋಸಗಾ.	33	33	1,61,500.00
77	ಕಿರಸಾವಳಗಿ.	10	10	18,500.00
78	ಮದರಾ ಬಿ.	48	48	2,26,500.00
79	ಮದರಾ [ಕೆ]	30	30	90,500.00
80	ನೀಲೂರ.	14	14	70,000.00
81	ಸಿದ್ದನೂರ.	28	28	45,500.00
82	ಸಿರಸಗಿ.	09	09	13,500.00
83	ಸಾಗನೂ.ರ	55	55	1,45,500.00
84	ಟಾಕಳಿ.	58	58	1,08,000.00
85	ತೆಗ್ಗಳ್ಳಿ.	13	13	24,000.00
86	ಉಮರಗಾ.	21	21	42,000.00
87	ವಡ್ಡೊಳ್ಳಿ.	18	18	83,000.00
	ಒಟ್ಟು	**5,262**	**5,262**	**1,87,00,000.00**

ಲಿಂಗಸಗೂರು ಯೋಜನೆಗಳು

654 (1055) ಶ್ರೀ ಮಾನಪ್ಪ ವಜ್ಜಲ್ (ಲಿಂಗಸುಗೂರು) : ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲಿಂಗಸುಗೂರು ಕ್ಷೇತ್ರದಲ್ಲಿ ಎಷ್ಟು ಏತ ನೀರಾವರಿ ಯೋಜನೆಗಳಿವೆ? ಹಾಗೂ ಎಷ್ಟು ಎಕರೆ ಜಮೀನಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗಿದೆ?

ಅ) ಕೆಲವು ವರ್ಷಗಳ ಹಿಂದೆ ಅಂಕನಾಳ ಏತ ನೀರಾವರಿ ಯೋಜನೆ ಪ್ರಾರಂಭವಾಗಿದ್ದು, ಇದುವರೆಗೂ ಕಾಮಗಾರಿ ಪೂರ್ಣಗೊಳಿಸದಿರಲು ಕಾರಣಗಳೇನು?

ಇ), ಲಿಂಗಸುಗೂರು ಕ್ಷೇತ್ರದಲ್ಲಿ ಹೊಸದಾಗಿ ಏತ ನೀರಾವರಿ ಯೋಜನೆಗಳನ್ನು ಪ್ರಸಕ್ತ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಗುವುದೇ?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು) :

ಅ) ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಒಂದು ಏತ ನೀರಾವರಿ ಯೋಜನೆ ಇದ್ದು, ಇದು ಸ್ಥಗಿತಗೊಂಡಿರುವುದರಿಂದ ಯಾವುದೇ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದಿಲ್ಲ.

ಆ) ಈ ಏತ ನೀರಾವರಿಯ ಯೋಜನೆಯನ್ನು ಗುತ್ತಿಗೆದಾರರು ನಿಗಧಿಪಡಿಸಿದ್ದ ಅವಧಿಯೊಳಗೆ ಪೂರ್ಣಗೊಳಿಸಲು ವಿಫಲರಾದ ಹಿನ್ನೆಲೆಯಲ್ಲಿ ಗುತ್ತಿಗೆಯನ್ನು ಗುತ್ತಿಗೆದಾರರ ಹೊಣೆ ಹಾಗೂ ಬಾದ್ಯತೆ ಮೇಲೆ ದಿನಾಂಕ: 04/03/2006 ರಲ್ಲಿ ರದ್ದುಪಡಿಸಲಾಗಿದೆ. ಯೋಜನೆಯಲ್ಲಿ ಬಾಕಿ ಉಳಿದಿರುವ ಕೆಲಸಗಳಿಗೆ ಪರಿಷ್ಕೃತ ಅಂದಾಜು ಪಟ್ಟಿಯನ್ನು ರೂ. 154.00 ಲಕ್ಷಗಳಿಗೆ ತಯಾರಿಸಲಾಗಿದೆ. ಅಂದಾಜು ಪಟ್ಟಿಗೆ ಅನುಮೋದನೆ ನೀಡಿ ಕಾಮಗಾರಿ ಕೈಗೊಳ್ಳಬೇಕಾಗಿರುವುದರಿಂದ ಕಾಮಗಾರಿಯು ಪೂರ್ಣಗೊಳಿಸುವಲ್ಲಿ ವಿಳಂಭವಾಗಿದೆ.

ಇ) ಇಲ್ಲ.

ಹಾಸನ ಜಿಲ್ಲೆಯಲ್ಲಿ ಭೂಸ್ವಾಧೀನ ಪ್ರಕ್ರಿಯೆ

655 (556) ಶ್ರೀ ಮಂಜು ಎ. (ಅರಕಲಗೂಡು) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಎರಡು ವರ್ಷಗಳಿಂದ ಹಾಸನ ಜಿಲ್ಲೆಯಲ್ಲಿ ರೈತರ ಮತ್ತು ಸರ್ಕಾರದ ಎಷ್ಟು ಎಕರೆ ಪ್ರದೇಶಗಳನ್ನು ಕೈಗಾರಿಕೆಗಳಿಗೆ ವಶಪಡಿಸಿಕೊಳ್ಳಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು)

ಆ) ಯಾವ ಯಾವ ಕೈಗಾರಿಕೆಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು)?